<u>**ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು ಜೆ.ಎಂ.ಎಫ್?ಸಿ., ಚಳ್ಳಕೆರೆ.**</u>

<u>**ಸಿ.ಸಿ ನಂ.396/2020.**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಶ | ಪಿ.ಡಬ್ಲ್ಯೂ: 03 |
| ತಂದೆಯ ಹೆಸರು | : | ಚನ್ನಪ್ಪ | ಸಿ.ಡಬ್ಲ್ಯೂ: 02 |
| ವಯಸ್ಸು | : | ಸು. 43 ವರ್ಷ | |
| ಉದ್ಯೋಗ | : | ವ್ಯಾಪಾರ | |
| ವಾಸ | : | ಘಟಪರ್ತಿ | |

ದಿನಾಂಕ 10.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**</u>

(ಆರೋಪಿತನು ಈ ದಿನ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ).

2016 ನೇ ಇಸವಿಯಲ್ಲಿ ಹಿರಿಯೂರು ರಸ್ತೆಯ ರೈಲ್ವೇ ಗೇಟ್ ಹತ್ತಿರ ಮಧ್ಯಾಹ್ನ 1.30 ಗಂಟೆಗೆ ಅಪಘಾತದ ಹಿನ್ನೆಲೆಯಲ್ಲಿ ಮಹಜರ್ ಕ್ರಮ ಜರುಗಿಸುವಾಗ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ.1 ಇದ್ದು ಮತ್ತೆ ಯಾರು ಇದ್ದರು ಅಂತ ಗೊತ್ತಿಲ್ಲ.

ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದನ್ನು ಈಗಾಗಲೇ ನಿಪಿ: 2 ಅಂತ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ: 2(ಸಿ) ಅಂತ ಗುರುತಿಸಲಾಯಿತು. ಒಂದು ಫ್ಯಾನಿನ ಲಾರಿಗೆ ಅಪಘಾತವಾಗಿದ್ದು, ಇನ್ನೊಂದು ಯಾವ ವಾಹನ ಅಂತ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಏನು ಮಾಡಿರುತ್ತಾರೆ ಅಂತ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಅಂತ ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನಿಪಿ: 2 ರಲ್ಲಿ ಏನು ಬರೆದಿರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ನಿಪಿಃ 7 ರಿಂದ 10 ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ಫ್ಯಾನಿನ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ.

ನಿಪಿಃ 3 ರಿಂದ 6 ರಲ್ಲಿರುವ ಲಾರಿಯ ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅಪಘಾತಪಡಿಸಿದ ಲಾರಿ ಇದೇ ಆಗಿರುತ್ತದೆ ಅಂತ ಗುರುತಿಸಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಅಪಘಾತಪಡಿಸಿದ ವಾಹನವನ್ನು ಅಮಾನತುಪಡಿಸಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ.

**(ಈ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 21.11.2016 ರಂದು ಚಳ್ಳಕೆರೆಯಿಂದ ಹೊರವಲಯದ ಎಸ್.ಆರ್.ಎಸ್. ಕಾಲೇಜು ಮುಂದಿನ ಹಿರಿಯೂರು ಕಡೆಯಿಂದ ಚಳ್ಳಕೆರೆ ಟೌನ್?ಕಡೆಯಿಂದ ಬರುವ ಎನ್.ಹೆಚ್.150 ಎ ರಸ್ತೆಯಲ್ಲಿ ಅಪಘಾತದ ಸಂಬಂಧ ನನ್ನನ್ನು ಮತ್ತು ಚಾಸಾ.3 ರವರನ್ನು ಪೊಲೀಸರು ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎಪಿ-16-ಟಿವೈ-6798 ನೇ ಲಾರಿಯು ಟಿಎನ್-28-ಬಿಬಿ-3474 ನೇ ಲಾರಿಗೆ ಅಪಘಾತಪಡಿಸಿರುತ್ತದೆ ಎಂದು ಚಾಸಾ.1 ರವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲ್ಕಂಡ ಎರಡೂ ಲಾರಿಗಳನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಸ್ಥಳದಲ್ಲಿ ಬೆಳಗ್ಗೆ 9.00-10.00 ಗಂಟೆ ವರೆಗೆ ನಿಪಿಃ 2 ರಂತೆ

ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿಃ 2 ಪಂಚನಾಮೆಯನ್ನು ನಮಗೆ ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ 3 ರಿಂದ 6 ಭಾವಚಿತ್ರದಲ್ಲಿರುವ ಲಾರಿಯನ್ನು ಘಟನಾ ಸ್ಥಳದಲ್ಲಿ ನೋಡಿರುತ್ತೇನೆ ಎಂದರೆ ಸಾಕ್ಷಿಯು ರಸ್ತೆಯಲ್ಲಿ ನಿಂತಿರುತ್ತವೆ ಅಂತ ಸಾಕ್ಷಿ ನುಡಿಯುತ್ತಾರೆ. ನನಗೆ ನಿಪಿಃ 2 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತನ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.